
2-8 ಫೆಬ್ರುವರಿ 1986

# ಸುಧಾ

ಬೆಲೆ : ರೂ. 2-00




ಭಾವಲೋಕದ ಅನುಭಾವಿ

## ಡಾ. ಸಿದ್ಧಯ್ಯ ಪುರಾಣಿಕ

# ಸುಧಾ


2–8 ಫೆಬ್ರುವರಿ 1986 ಸಂಪುಟ : 22 ಸಂಚಿಕೆ : 5


## ಈ ಸಂಚಿಕೆಯಲ್ಲಿ



**14** ವಿಶೇಷ ಲೇಖನ

58ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವ ಡಾ. ಸಿದ್ದಯ್ಯ ಪುರಾಣಿಕರು ಕಳೆದ ನಾಲ್ಕೈದು ದಶಕಗಳಿಂದಲೂ ಕನ್ನಡದ ನುಡಿ ಸೇವೆ ಮಾಡುತ್ತ ಬಂದವರು. ಹಲವಾರು ಕೃತಿಗಳ ಮೂಲಕ ಕನ್ನಡಿಗರಿಗೆ 'ಕಾವ್ಯಾನಂದ' ಎಂಬ ಹೆಸರಿನಿಂದ ಪರಿಚಿತರು. ಇವರನ್ನು ಕುರಿತು ವಿಚಾರಪ್ರಿಯ ಅವರ ವಿಶೇಷ ಲೇಖನ.



**26** ಧರ್ಮ

ಎರಡನೆಯ ಪೋಪ್ ಪಾಲ್ 'ವಿಶ್ವಸಂಚಾರಿ' ಪೋಪ್ ಎಂದೇ ಹೆಸರಾದವರು. ಅವರೀಗ ಕರ್ನಾಟಕಕ್ಕೆ ಭೇಟಿ ಕೊಡುವ ಮೊದಲ ಪೋಪ್ ಕೂಡಾ. ಇವರ ಬಗ್ಗೆ ಆಗಾಗ ಕೆಲವು ವಿವಾದಗಳೇಳುತ್ತಿವೆಯಾದರೂ 84 ಕೋಟಿ ಕ್ರಿಸ್ತ ಧರ್ಮೀಯರಿಗೆ ಇವರು ಗೌರವ, ಭಕ್ತಿ ಸ್ವರೂಪೀ ವ್ಯಕ್ತಿ.



**47** ವಿದ್ಯಮಾನ

ಕುಷ್ಠರೋಗಿಗಳಿಗೆ, ಬುಡಕಟ್ಟಿನ ಜನರಿಗೆ ಆಶಾದೀವಿಗೆಯಾಗಿರುವ ಬಾಬಾ ಆಮ್ಟೆ ಈಗ ಭಾರತ ಸಂಚಾರ ಮಾಡುತ್ತಿದ್ದಾರೆ– ಅದೂ ವಿಶಿಷ್ಟ ರೀತಿಯಲ್ಲಿ, 'ಭಾರತ ಜೋಡಿಸಿ' ಸೈಕಲ್ ಯಾತ್ರೆ ಕುರಿತ ಚಿತ್ರಗಳು–ಲೇಖನ.


**ಕಥೆ**

11 ಬಾಲಾಯಣ ● ಅನಿತಾ ಮಂಜುನಾಥ್

44 ಕಾಮದಹನ ● ಟಿ.ಜಿ. ಅಂಬರೀಷ್

**ಧಾರಾವಾಹಿ**

19 ಬದಲಾಗುವ ಬಣ್ಣಗಳು–11 ● ಜಿ. ಗೀತಾ ನಾಗಭೂಷಣ

30 ಅಭಿಲಾಷೆ–24 ● ಯಂಡಮೂರಿ ವೀರೇಂದ್ರನಾಥ್

51 ಶವಸಾಧನೆ–2 ● ಹಂದನಕೆರೆ ವೆಂಕಟದಾಸು

**ಕಾಮಧೇನು**

23 ಧಾರವಾಡದ ಗ್ರಾಮೀಣ ಹೆಣ್ಣು–1 ● ಡಾ. ಶಾರದಾ ಮಾನವೀಕರ್

**ಕಾವ್ಯಸುಧಾ**

59 ನನ್ನ ಜೀವನದಲ್ಲಿ ● ಎಚ್. ಆನಂದರಾಮ ಶಾಸ್ತ್ರಿ

ನನ್ನ ಮಾತು ● ಭೀಮಸೇನ್ ಎಸ್. ಪಪ್ಪು

**ಸುದ್ದಿಯ ಹಿನ್ನೆಲೆ**


61 ಶ್ರೀಲಂಕಾದ ಭಾರತೀಯ ಮೂಲದ ತಮಿಳರು ● ಸಮದರ್ಶಿ

**ಸ್ಥಿರ ಶೀರ್ಷಿಕೆಗಳು**

7 ನಿಮ್ಮಪುಟ, 9 ವಾರೆನೋಟ, 34–35 ಫೋಟೋಕಾಮಿಕ್ಸ್, 37 ಬಾಲವಿಹಾರ, 40–41 ಕೆಣಕು ತಿಣುಕು, 42–43 ಕಾಮಿಕ್ಸ್, 62 ಭವಿಷ್ಯ 63 ವ್ಯಕ್ತಿ ವಿಷಯ, 64 ಚಿತ್ರಸುಧಾ.


ರಕ್ಷಾಪುಟ ವರ್ಣಪಾರದರ್ಶಿಕೆ : ಎಚ್.ಕೆ. ರಾಜಶೇಖರ. ವಿನ್ಯಾಸ : ಸೂರಿ.


ಪ್ರಧಾನ ಸಂಪಾದಕ :
ಕೆ.ಎನ್. ಹರಿಕುಮಾರ್
ಸಂಪಾದಕ :
ಎಂ.ಬಿ. ಸಿಂಗ್
ಪ್ರಕಾಶಕ–ಮುದ್ರಕ :
ಅನಂತರಾಮು,
ಡೆಕ್ಕನ್ ಹೆರಾಲ್ಡ್ ಪ್ರೆಸ್,
ಮಾಲೀಕರು :
ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್
75, ಮಹಾತ್ಮಾ ಗಾಂಧಿ ರಸ್ತೆ
ಬೆಂಗಳೂರು–560 001
ದೂರವಾಣಿ : 573291
ತಂತಿ : 'ಸುಮ'


## ವಿಶೇಷ ಲೇಖನ

# ಭಾವಲೋಕದ ಅನುಭಾವಿ
# ಡಾ. ಸಿದ್ಧಯ್ಯ ಪುರಾಣಿಕ

ಡಾ|| ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ'ರಾಗಿ ಪ್ರಸಿದ್ಧರಾದದ್ದು ಅವರ ಸ್ನಿಗ್ಧ ಕಾವ್ಯದಿಂದ. ಭಾವನೆಗಳ ತೀವ್ರತೆಯುಳ್ಳ 'ಜಲಪಾತ' ಸಂಗ್ರಹದಿಂದ ಈಚಿನ 'ವಚನೋದ್ಯಾನ'ದವರೆಗೆ ಹಲವು ಮುಖಗಳಲ್ಲಿ ಅವರ ಕಾವ್ಯ ಪ್ರತಿಭೆ ಮಿಂಚಿದೆ. ವಾರ್ತಾ ಮತ್ತು ಪ್ರವಾಸೋದ್ಯಮದ ನಿರ್ದೇಶಕರಾಗಿ. ಜಿಲ್ಲಾಧಿಕಾರಿಗಳಾಗಿ. ಸಾರಿಗೆ ಹಾಗೂ ಕಾರ್ಮಿಕ ಆಯುಕ್ತರಾಗಿ ಸೇವೆ ಸಲ್ಲಿಸಿರುವ ಪುರಾಣಿಕರು ಗೌರವ ಡಾಕ್ಟೊರೇಟನ್ನೂ ಒಳಗೊಂಡಂತೆ ಅನೇಕ ಪ್ರಶಸ್ತಿ, ಸನ್ಮಾನಗಳನ್ನು ಗಳಿಸಿದ್ದಾರೆ. ಈಗ 58ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಗೌರವ.

**ಈ ಲೇಖನ ಅಚ್ಚಿಗೆ ಹೋಗುವ ಸಮಯದಲ್ಲಿ ಫೆಬ್ರುವರಿ 1ನೇ ತಾರೀಖಿನಿಂದ ಕಲ್ಬುರ್ಗಿಯಲ್ಲಿ ಆರಂಭವಾಗಬೇಕಾಗಿದ್ದ ಸಾಹಿತ್ಯ ಸಮ್ಮೇಳನ ಅನಿರ್ದಿಷ್ಟ ಕಾಲ ಮುಂದಕ್ಕೆ ಹೋದ ವರದಿ ಬಂದಿದೆ.**

• ವಿಚಾರಪ್ರಿಯ



ಚಿತ್ರಗಳು : ಎಚ್.ಜಿ. ರಾಜಶೇಖರ್

ಕಲ್ಬುರ್ಗಿಯಲ್ಲಿ ನಡೆಯಲಿರುವ ಐವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ// ಸಿದ್ಧಯ್ಯ ಪುರಾಣಿಕ ಅವರು ಮೂಲತಃ ಕವಿ. 'ಕಾವ್ಯಾನಂದ' ಎಂಬುದು ಪುರಾಣಿಕರ ಕಾವ್ಯನಾಮ.

ಡಾ//ಸಿದ್ಧಯ್ಯ ಪುರಾಣಿಕ ಅವರು ಹುಟ್ಟಿದ್ದು ಹಳೆಯ ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ್ದ, ಈಗ ಕರ್ನಾಟಕದ ಭಾಗವಾಗಿರುವ ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರ ಎಂಬ ಹಳ್ಳಿಯಲ್ಲಿ (18-6-1918). ಹಳೆಯ ಮೈಸೂರು ಸಂಸ್ಥಾನದ ನೆರೆಯ ಪ್ರಾಂತ-ಸಂಸ್ಥಾನಗಳ ಅಂಚಿಗೆ ಸೇರಿ ಸೊರಗುತ್ತಿದ್ದ ಕನ್ನಡ ಪ್ರದೇಶಗಳು ಎಲ್ಲ ವಿಚಾರಗಳಲ್ಲೂ ಅಲ್ಲಿಯ ಸರ್ಕಾರಗಳ ಅವಜ್ಞೆಗೆ ಒಳಗಾಗಿದ್ದ ಕಾಲವದು. ಹೈದರಾಬಾದ್ ಕರ್ನಾಟಕವಂತೂ ಬಹಳ ಹಿಂದುಳಿದಿತ್ತು

ದ್ಯಾಂಪುರದ ಒಂದು ವೈಶಿಷ್ಟ್ಯವೆಂದರೆ ಅಲ್ಲಿದ್ದ ವಿದ್ಯಾವಂತರ ಸಂಖ್ಯೆ ಉಳಿದ ಊರುಗಳಲ್ಲಿದ್ದವರದಕ್ಕಿಂತ ಅಧಿಕ. ಡಾ// ಸಿದ್ಧಯ್ಯ ಪುರಾಣಿಕ ಅವರ ಹಿರಿಯರು ಆಗರ್ಭ ಶ್ರೀಮಂತರಲ್ಲದಿದ್ದರೂ ಸುಸಂಸ್ಕೃತರು, ಸುಶಿಕ್ಷಿತರು. ಪುರಾಣಿಕರ ತಾತ ಚೆನ್ನಕವಿಗಳೆಂದು ಪ್ರಸಿದ್ಧರಾಗಿದ್ದರು. ತಂದೆ ಕಲ್ಲಿನಾಥ ಶಾಸ್ತ್ರಿಗಳೂ ಕವಿಗಳು. ಜೊತೆಗೆ ಪ್ರವಚನಕಾರರು. ಡಾ// ಸಿದ್ಧಯ್ಯ ಪುರಾಣಿಕರು ತಂದೆ ತಾತಂದಿರಿಂದ ಪ್ರಭಾವಿತರಾದರು. ಮನೆಯಲ್ಲಿ ಆಗಾಗ ಕಾವ್ಯ ಗೋಷ್ಠಿ, ಶಾಸ್ತ್ರ ವಿಷಯಕ ಚರ್ಚೆ, ವಿನೋದ, ಉಪನ್ಯಾಸ, ತಂದೆಯವರು ಹೇಳುತ್ತಿದ್ದ ಪುರಾಣ ಪುಣ್ಯಕಥೆಗಳನ್ನೂ ಹುಡುಗ ಪುರಾಣಿಕರು ಆಗಾಗ ಕೇಳುತ್ತಿದ್ದರು. ಇವೆಲ್ಲದರ ಜೊತೆಗೆ ವ್ಯಾಕರಣ ಛಂದಸ್ಸುಗಳ ಪರಿಚಯ. ಡಾ// ಸಿದ್ಧಯ್ಯ ಪುರಾಣಿಕರ ಕಾವ್ಯಾಸಕ್ತಿ ಸಹಜವಾಗಿಯೇ ವಿಕಾಸಗೊಂಡಿತು. ಅವರ ಸೋದರಮಾವ ಕಾಲಕಾಲೇಶ್ವರ ಶಾಸ್ತ್ರಿಗಳು ಪುರಾಣಿಕರ ಪ್ರಥಮ ಗುರು. ಮಾನಸಿಕ ಬೆಳವಣಿಗೆಗೆ ಅನುವಾಗಿ ಒದಗಿಬಂದ ವಾತಾವರಣವೇ ಎಲ್ಲೆಲ್ಲೂ.

ಸಿದ್ಧಯ್ಯ ಪುರಾಣಿಕರು ಪ್ರತಿಭಾವಂತ ವಿದ್ಯಾರ್ಥಿ. ಕುಕ್ಕನೂರಿನ ವಿದ್ಯಾ ಗುರುಕುಲದಲ್ಲಿ ಅವರ ಮಾಧ್ಯಮಿಕ ಶಿಕ್ಷಣ. ದೇಸಾಯಿ ಪಾಡುರಂಗರಾಯರು ಅವರ ಗುರುಗಳು. ಹುಡುಗ ಪುರಾಣಿಕರಲ್ಲಿ ಅವರಿಗೆ ಅಪಾರವಾದ ಪ್ರೀತಿ. ಮಾಧ್ಯಮಿಕ ಶಾಲೆಯ ಪರೀಕ್ಷೆಯಲ್ಲಿ ಪುರಾಣಿಕರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು.

## ಮೊದಲ ಕವನ

ಮುಂದೆ ಕಲ್ಬುರ್ಗಿಯಲ್ಲಿ ಅವರ ವಿದ್ಯಾಭ್ಯಾಸ. ಕಲ್ಬುರ್ಗಿಯಲ್ಲಿ ಆಗ ಕನ್ನಡದ ನವೋದಯವಾಗುತ್ತಿತ್ತು, ಡಾ// ಸಿದ್ಧಯ್ಯ ಪುರಾಣಿಕರಿಗೆ ಆ ವೇಳೆಗಾಗಲೇ ಕನ್ನಡದಲ್ಲಿ ವಿಶೇಷ ಅಭಿಮಾನ, ಕನ್ನಡದಲ್ಲಿ ಭಾಷಣ ಮಾಡುವ ಉತ್ಸಾಹ. ಕವಿತೆಯ ರಚನೆಯ ಆರಂಭವಾದ್ದು ಸುಮಾರು ಆ ಸಮಯದಲ್ಲಿ ಅಲ್ಲಿಯ ತರುಣ ಸಂಘದವರು ಏರ್ಪಡಿಸಿದ್ದ ಕವನಸ್ಪರ್ಧೆಯಲ್ಲಿ ಅವರ 'ಬೆಳಗು' ಎಂಬ ಕವನಕ್ಕೆ ಮೊದಲ ಬಹುಮಾನ. ಇದರಿಂದ ಏರಿದ ಉತ್ಸಾಹ.

ವಿದ್ಯಾಭ್ಯಾಸ ಮುಂದುವರಿಯಿತು. ಮೆಟ್ರಿಕ್ ಪರೀಕ್ಷೆಯಲ್ಲಿ ಉಸ್ಮಾನಿಯ ವಿಶ್ವ ವಿದ್ಯಾಲಯದಲ್ಲೇ ಅವರಿಗೆ ಮೂರನೆಯ ಸ್ಥಾನ ಇಂಗ್ಲಿಷ್-ಕನ್ನಡಗಳಲ್ಲಿ ಅತ್ಯಧಿಕ ಅಂಕ. ಆಮೇಲೆ ಇಂಟರ್.

ನಡುವೆ ಅವರ ಆರೋಗ್ಯ ಕೆಟ್ಟಿತ್ತು, ಮದನಪಲ್ಲಿಯ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿದಾಗ ಮನಸ್ಸಿಗೆ ಧೈರ್ಯವಾಯಿತು. ಊರಿಗೆ ಹಿಂದಿರುಗಿದಾಗ ಮನೆಯಲ್ಲಿ ಅವರ ಮದುವೆಗೆ ಸಿದ್ಧತೆ ನಡೆದಿತ್ತು ಒಲ್ಲದ ಪುರಾಣಿಕರು ಮನೆಬಿಟ್ಟು ಹೋದರು. ಹರ್ಡೇಕರ್ ಮಂಜಪ್ಪನವರಲ್ಲಿ ಕೆಲಕಾಲ ಇದ್ದರು. ಅದು ಒಳ್ಳೆಯದೇ ಆಯಿತು. ಹಳೆಯ ಕವಿಗಳ ಅಧ್ಯಯನ ಸಾಧ್ಯವಾಯಿತು. ಅವರು ಆಗ ಮುಪ್ಪಿನ ಷಡಕ್ಷರಿಯ ಹಾಡುಗಳನ್ನು ಸಂಪಾದಿಸಿದರು.



ಪುರಾಣಿಕರು ಮತ್ತೆ ಓದು ಮುಂದುವರಿಸಿ ಇಂಟರ್ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದರು. ಮುಂದೆ ಹೈದರಾಬಾದಿನಲ್ಲಿ ಬಿ.ಎ. ಅದರಲ್ಲೂ ಪ್ರಥಮಸ್ಥಾನ. ಆಮೇಲೆ ಎಲ್.ಎಲ್.ಬಿ.

ಅವರ ಕಾವ್ಯಾಭ್ಯಾಸ, ಕಾವ್ಯರಚನೆ ಮುಂದುವರಿದೇ ಇದ್ದುವು. ಕಾಲೇಜಿನಲ್ಲಿ ಅವರು ಕವಿಯೆಂದು ಹೆಸರು ಪಡೆದಿದ್ದರು. ವಿದ್ಯಾರ್ಥಿಗಳ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಅವರ ಕವನಗಳು 'ಜಯಕರ್ನಾಟಕ' ಮಾಸಪತ್ರಿಕೆಯಲ್ಲಿ ಪ್ರಕಟವಾದುದರಿಂದ ಅವರಿಗೆ ಒಳ್ಳೆಯ ಪ್ರೋತ್ಸಾಹ ದೊರಕಿತು. ಬಿ.ಎ.ಯಲ್ಲಿ ಓದುತ್ತಿದ್ದಾಗ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಓದಿದ ಕವಿತೆಗಳು ಸಹೃದಯರ ಹಾಗೂ ಹಿರಿಯ ಸಾಹಿತಿಗಳ ಮೆಚ್ಚುಗೆ ಗಳಿಸಿದುವು. ಅವರು ಒಳ್ಳೆಯ ಭಾಷಣಕಾರರೂ ಕವಿಗಳು ಆಗಿದ್ದಂತೆ ನಾಟಕಕಾರರೂ ಎನಿಸಿಕೊಂಡರು. 'ಆತ್ಮಾರ್ಪಣ' ಎಂಬುದು ಅವರು ವಿದ್ಯಾರ್ಥಿಯಾಗಿದ್ದಾಗ ಬರೆದ . ನಾಟಕ. ಅದರಲ್ಲಿ ಅವರು ವಹಿಸಿದ ಬಸವೇಶ್ವರನ ಪಾತ್ರವನ್ನು ಪ್ರೇಕ್ಷಕರು ಮೆಚ್ಚಿಕೊಂಡರು.

ವಿದ್ಯೆ ಮುಗಿದ ಕೂಡಲೇ ಡಾ// ಸಿದ್ಧಯ್ಯ ಪುರಾಣಿಕ ಅವರಿಗೆ ಸರ್ಕಾರಿ ಹುದ್ದೆ ದೊರಕಿತು. ತಹಸೀಲ್ದಾರರಾಗಿ ನೇಮಕಗೊಂಡ ಪುರಾಣಿಕರು ಆಮೇಲೆ ಹಲವು ಬಗೆಯ ಅಧಿಕಾರ ನಿರ್ವಹಿಸಿದರು. ಕರ್ನಾಟಕ ಏಕೀಕರಣವಾದ ಮೇಲೆ ಅವರ ಸೇವೆ ವಿಸ್ತರಿಸಿತು. ವಾರ್ತಾ ಮತ್ತು ಪ್ರವಾಸೋದ್ಯಮದ ನಿರ್ದೇಶಕ, ಕೊಡಗು ಬೆಳಗಾಂ ಜಿಲ್ಲಾಧಿಕಾರಿ, ಸಾರಿಗೆ ಹಾಗೂ ಕಾರ್ಮಿಕ ಆಯುಕ್ತ-ಹೀಗೆ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ದಕ್ಷತೆ, ಪ್ರಾಮಾಣಿಕತೆಗಳಿಂದ ಪುರಾಣಿಕರು ಒಳ್ಳೆಯ ಹೆಸರು ಗಳಿಸಿ ನಿವೃತ್ತರಾದರು.

## 'ಕಾವ್ಯಾನಂದ'


ಡಾ// ಸಿದ್ಧಯ್ಯ ಪುರಾಣಿಕರಿಗೆ ಬಹಳ ನೆಮ್ಮದಿ ನೀಡುತ್ತಿದ್ದದ್ದೆಂದರೆ, ನೆಮ್ಮದಿ ನೀಡುತ್ತಿರುವುದೆಂದರೆ, ಕಾವ್ಯರಚನೆ. ಡಾ// ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ' ಎಂಬ ಹೆಸರನ್ನು ಇಟ್ಟುಕೊಂಡಿದ್ದು ಅವರು ವಿದ್ಯಾರ್ಥಿಯಾಗಿದ್ದಾಗಲೇ. 'ಕಾವ್ಯದೇವಿ' ಎಂಬ ಕವನದ ಸಾಲುಗಳಲ್ಲಿ ಅವರು 'ಕಾವ್ಯಾನಂದ' ಎಂಬ ಹೆಸರು ಇಟ್ಟುಕೊಂಡದ್ದರ ವಿವರಣೆಯಿದೆ : 'ನಿನ್ನಾತ್ಮವಾನಂದ, ನನ್ನಾತ್ಮ ಕಾವ್ಯ; ಇಂತು ಕಾವ್ಯಾನಂದ ನಾಮ ಸುಶ್ರಾವ್ಯ.'

ಕಾವ್ಯಾನಂದರ ಮೊದಲನೆಯ ಕವನ ಸಂಕಲನ 'ಜಲಪಾತ' ಪ್ರಕಟವಾದ್ದೂ ಸುಮಾರು ಮೂವತ್ತೂರು ವರ್ಷ ಹಿಂದೆ (1953). 'ಸಿದ್ಧಯ್ಯನವರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು; ದೇಶ ಸೇವಾತತ್ಪರರಾದವರ ಸಂಗ ಸಹವಾಸಗಳಲ್ಲಿ ಕಾಲ ಕಳೆದರು. ಅವರು ಮಾಡಿದ ವಿದ್ಯಾಭ್ಯಾಸವೂ ಅವರ ಹೃದಯದವರೆಗೆ ಪ್ರವೇಶಮಾಡಿತು. ಇದೆಲ್ಲದರ ಪರಿಣಾಮವೆಂದರೆ ಅವರಲ್ಲಿ ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿಗುಣವೂ ಸೇರಿಕೊಂಡಿವೆ', ಎಂದು ಬೇಂದ್ರೆಯವರು ಈ ಪುಸ್ತಕದ ಮುನ್ನುಡಿಯಲ್ಲಿ ಹೇಳಿದ್ದಾರೆ. 'ಕಾವ್ಯಾನಂದರ ಕಾವ್ಯರಚನೆಯ ಅಸ್ತಿಭಾರಕ್ಕೆ ತತ್ತ್ವಗಳ

ತೂಕವಿರುವುದರಿಂದಲೇ ಅವರ ರಾಗದ ತ್ವೇಷದ ನುಡಿಗಳಲ್ಲಿ ಬೆಂಕಿಯ ಜತೆಜತೆಗೆ ಬೆಳಕು ನುಗ್ಗುತ್ತದೆ. ಎಂದಿದ್ದಾರೆ. 'ಇಪ್ಪತ್ತನೆಯ ಶತಮಾನದ ವಿಶ್ವಗ್ರಾಸಿಯಾದ ಜ್ವಾಲಾಮಾಲೆಯಲ್ಲಿ ಕಂಡ ಘೋರರೂಪವನ್ನು ಅನೇಕ ಮುಖವಾಗಿ' ವರ್ಣಿಸಿರುವುದು ಇಲ್ಲಿಯ ಕವನಗಳ ವೈಶಿಷ್ಟ್ಯ.

**ಧುಮ್ಮಿಕ್ಕಿ ಹಾರುವೆನು ಧೀಂಕಿಡುತ ಓಡುವೆನು**
**ಎದುರಾದುದನು ಕೊಚ್ಚಿ ಹುಚ್ಚು ಹೊನಲಾಗಿ**
**ನಿಂತು ಜಾನಿಸೆ ನನಗೆ ಶಾಂತಿಯೆಲ್ಲಿದೆ? ಕ್ರುದ್ಧ-**
**ರಭಸದಲಿ ಗರ್ಜಿಸುವೆ ನಿಚ್ಚಕನಲಾಗಿ!**

-ಎಂಬ ತಡಸಲಿನ ಮನೋಧರ್ಮವೇ ಇಲ್ಲಿ ಕವಿಗೆ. 'ನನ್ನ ಸ್ವಾತಂತ್ರ್ಯವೇ ನನ್ನ ರಾಗದ ಗುಟ್ಟು ನನಗಿಲ್ಲ, ಅವರಿವರ ಕಟ್ಟುನಿಟ್ಟು, ಎಡರು ಕಂಟಕಗಳನು ತೊಡೆದು ದಾರಿಯ ಕೊರೆವ ಕಾರ್ಯ ನನ್ನದು. ನಾನು ಆರದಿಹ ಸಿಟ್ಟು!' ಎನ್ನುತ್ತಾರೆ ಕವಿ. ಮಾನವ ಸಮಾಜ, 'ಬರುತಿದೆ ಬಡವರ ಯುಗ!', 'ನಿನ್ನರವೆ ನರಕ ಬಡವ!', 'ಬಡಜನರ ದುಃಖವೇ ಬರಸಿಡಿಲು ಧನಿಕ!', 'ಏಷ್ಯಾ' ಮುಂತಾದ ಕವನಗಳ ಶೀರ್ಷಿಕೆಗಳೇ ಅವುಗಳ ವಸ್ತು-ವಿಚಾರಗಳನ್ನು ತಿಳಿಸುತ್ತವೆ. ಅನ್ಯಾಯದ ಎದುರಿಗಿನ ಆಕ್ರೋಶದ ಜೊತೆಗೇ ಮನಸ್ಸಿನ ಆಳಕ್ಕೆ ಇಳಿದು ಚಿಂತಿಸುವ ಹಂಚಿಕೆಯೂ ಇಲ್ಲಿ ನಡೆದಿದೆ. 'ಇಡಿಯ ಏಷ್ಯಾ ಖಂಡ ಹಿರಿಯ ಬಂದೀಖಾನೆ, ಪರರ ಬಲೆಯಲಿ ಸಿಕ್ಕಿಬಿದ್ದ ಮದ್ದಾನೆ. ಇಲ್ಲಿ ಬಡತನ ದಾಸ್ಯ ಅಜ್ಞಾನ ಬಹುಬೇನೆ. ಮೇಲೆ ತುಳಿಯುತಲಿಹುದು



ಪರರಾಷ್ಟ್ರಗಳ ಸೇನೆ. ಇದುಕುಂಟೆ ಈ ನರಕದಿಂದ ಮುಕ್ತಿ? ಎಂದು ಸಿಡಿದೇಳುವುದು ಇದರ ಶಕ್ತಿ?' ಎಂದು ಕೇಳುವ ಕವಿ ಮುಂದಿನ ಒಂದು ಕವನದಲ್ಲಿ, 'ಜ್ಞಾನ ಕರ್ಮಕ್ಕೆ ಕಣ್ಣು, ಕರ್ಮ ಜ್ಞಾನಕೆ ಕಾಲು; ಮಧುರ ಸಹಕಾರವೇ ಉಭಯ ಹಿತಕಾರಿ' ಎಂದು ಚಿಂತಿಸುತ್ತಾರೆ.

ಮುಂದಿನ ಕವನ ಸಂಕಲನವಾದ 'ಕರುಣಾಶ್ರಾವಣ'ದ ವೇಳೆಗೆ (1955) ಕವಿ ಹೆಚ್ಚು ಚಿಂತನಶೀಲರಾಗುತ್ತಾರೆ. ಕೋಪ ಆವೇಶಗಳ ಅಲೆ ತಗ್ಗಿ ಸಾಗರದಾಳದ ಗಾಂಭೀರ್ಯ ಸಿದ್ಧಿಸಿದೆ.

**ಸೋತು ಬಂದೆಯಾ ಮಂದಾನಿಲ?**
**ಹೌದಣ್ಣ, ಹೂವುಗಳ ಬಾಯ್ತೆರೆಸಿ ಬಂದೆ**
**ಸೆರೆಸಿಕ್ಕ ಪರಿಮಳದ ಸೆರೆ ಬಿಡಿಸಿ ಬಂದೆ**
**ಬಳ್ಳಿಗಳ ಮಕ್ಕಳಿಗೆ ಆನಿಮಾಡಿಸಿ ಬಂದೆ**
**ತರುಮರದ ಎಲೆಯೆಲೆಯ ಹುಡಿಯ ಜಾಡಿಸಿ ಬಂದೆ**



**ಕೇತಕಿಯ ಸಿಕ್ಕುಗಳ ಬಿಡಿಸುತ್ತ ಬರುವಾಗ**
**ಮೈಗೆಲ್ಲ ಮುಳ್ಳುಗಳ ಬರೆಕೊಂಡು ಬಂದೆ**
**ಬಹುನೊಂದು ಬಂದೆ!**

-ಎಂಬ ಸಾಲುಗಳಲ್ಲಿ ಅವರ ಅನುಭವ ಅಡಕವಾಗಿದೆ. 'ಬಾಳ ಹೊತ್ತಗೆಯಲ್ಲಿ ಪ್ರತಿದಿನವು ಪುಟವೊಂದು ಬರೆ ನಿತ್ಯ ಪ್ರತಿಪುಟದಿ ನವ್ಯ ಕೃತಿಯ. ಬರಿ ಹಾಳೆಗಳನುಳಿಸಿ ಪಾಳ್ಗೈಯದಿರು ಅದನು. ತುಂಬ ಬರೆ ನಿನ್ನ ಸ್ಮೃತಿ ಶೃತಿಯ ಕೃತಿಯ' ಎಂದು ತಮಗೆ ತಾವೇ ಹೇಳಿಕೊಳ್ಳುತ್ತಾರೆ ಕವಿ. 'ಓ ಉತ್ತಮೋತ್ತಮ! ಒಳಗಿನ ಪುರುಷೋತ್ತಮ! ಪ್ರಖರವಾಗಿ ಪ್ರಕಟವಾಗು ನರನ ಮರೆಯ ನರೋತ್ತಮ-ಓ ಅಂತರಾತುಮ!' ಇದು ಅವರ ಹಾರೈಕೆ. ಈ ಸಂಕಲನದ ಹಲವು ಕವನಗಳಲ್ಲಿ ನಿಸರ್ಗದ ಹಲವಾರು ಮುಖಗಳ ಸುಂದರ ವರ್ಣನೆಗಳುಂಟು.

## ಎಲ್ಲ ಸೊಗಸು

'ಜಲಪಾತ', 'ಕರುಣಾಶ್ರಾವಣ'ಗಳಲ್ಲದೆ 'ವಿಕಾಸಮಣಿ', 'ತುಪ್ಪಾರೊಟ್ಟಿ ಗೇಗೇಗೇ', 'ಮಾನಸ ಸರೋವರ', 'ಕಲ್ಲೋಲ ಮಾಲೆ', ಮೊದಲು ಮಾನವ ಭಾಗ್ಯ ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿರುವ ಕವಿ ಕಾವ್ಯಾನಂದರು ಸಂಕಲನದಿಂದ ಸಂಕಲನಕ್ಕೆ ಬೆಳೆಯುತ್ತಿರುವುದನ್ನು ಕಾಣಬಹುದು. 'ಹೊಸ ಹೊಸ ಕಲ್ಪನೆಗಳು, ಹೊಸ ಹೊಸ ಉಪಮಾನಗಳು, ಹೊಸ ಹೊಸ ಪ್ರಾಸಗಳು, ಹೊಸ ಓಟ-ಕುಣಿತಗಳು, ಎಲ್ಲ ಸೊಗಸು' ಎಂದು ಡಿವಿಜಿ 'ಕರುಣಾಶ್ರಾವಣ'ದ ಬಗ್ಗೆ ಆಡಿರುವ ಮಾತು ಎಲ್ಲ ಕವನ ಸಂಕಲನಗಳಿಗೂ ಅನ್ವಯಿಸುತ್ತದೆ. 'ಕಾವ್ಯಾನಂದರ ಹೃದಯದಲ್ಲಿ ಶಿವಕಾರುಣ್ಯದ ಸೆಲೆಯಿರುವುದರಿಂದ ಅನೇಕ ಕೃತಿಗಳು ಹೊರಬರುತ್ತಲೇ ಇವೆ' ಎಂದಿದ್ದಾರೆ, ಪುತಿನ. ಅವರ ಕವನ ಸಂಕಲನಗಳ ಪೈಕಿ 'ತುಪ್ಪಾರೊಟ್ಟಿ ಗೇಗೇಗೇ', 'ಗಿಲ್ ಗಿಲ್ ಗಿರ್ಲಚ್ಚಿ' ಮಕ್ಕಳಿಗಾಗಿ ಬರೆದ ಪದ್ಯಗಳ ಸಂಕಲನಗಳು. ಅವುಗಳಲ್ಲಿ ಕೂಡ ಕವಿಯ ಮನಸ್ಸಿನ ತುಡಿತವಿದೆ. ಬಾಳಿನಲ್ಲಿ ನೆಮ್ಮದಿ, ಅಧಿಕಾರದಲ್ಲಿ ಪ್ರಗತಿ, ಆತ್ಮವಿಶ್ವಾಸ, ಬಹುಜನ ಸ್ನೇಹ, ಆದರ ಎಲ್ಲವೂ ಪ್ರಾಪ್ತವಾದ್ದನ್ನು ಅವರ ಕವನಗಳೂ ಪ್ರತಿಫಲಿಸುತ್ತವೆಯಾದರೂ ಮೌಲ್ಯಗಳ ಕುಸಿತ, ಅನ್ಯಾಯದ ವ್ಯವಸ್ಥೆ, ಬಡತನ-ಸಿರಿತನಗಳ ದ್ವಂದ್ವ ಎಲ್ಲವನ್ನೂ ಚಿತ್ರಿಸುವ ಹವ್ಯಾಸವನ್ನು ಅವರು ಬಿಟ್ಟಿಲ್ಲ. 'ಸಿವ-ಸುಗ್ಗಿ', 'ಏಕೆ ನಕ್ಕೆ?', ಏಕೆ ಅತ್ತೆ?' ಇಂಥ ಕವನಗಳ ಜೊತೆಗೆ 'ಮನದ ಮಸಣ', 'ಕುರುಡು ದೈವಕ್ಕೆ'ಯಂಥ ಕವನಗಳೂ ಇವೆ. 'ಏಕೆ ನಕ್ಕೆ ಹೇಳು ಚೆನ್ನೆ?' ಎಂದು ಬರೆಯುವ ಕವಿಯೇ, 'ಮೂಗು ಮುರಿಯದಿರು ಗೆಳೆಯ-ಎಂಥ ತಾಣಕೆ ಬಂದೆನೆಂದು. ಇಂದು ನೀ ನೋಡುತಿಹೆಯಿಲ್ಲಿ ಬೆಲೆಗಳ ಬೂದಿಯನು, ಕಲೆಗಳ ಕೊಳೆತ ಹೆಣಗಳನು, ಒಲವಿನ ತಲೆಬುರುಡೆಯನ್ನು' ಎಂದೂ ಬರೆಯುತ್ತಾರೆ.

ಸ್ವತಂತ್ರ ಭಾರತದ ಮಹಾ ಪರಿವರ್ತನೆಯ ದಿನಗಳಲ್ಲಿ ಆಡಳಿತಗಾರರಾಗಿ ಅಗಾಧ ಹೊಣೆ ನಿರ್ವಹಿಸಿದ ಸಿದ್ಧಯ್ಯ ಪುರಾಣಿಕರು ನಾಡಿಗೆ ಒದಗಿದ ನಾನಾ ಕುತ್ತುಗಳನ್ನು ಕುರಿತು ಕೂಡ ಕವಿತೆ ರಚಿಸಿದ್ದಾರೆ. ರಾಷ್ಟ್ರದ ಭಾವೈಕ್ಯ, ಚೀನೀ ಆಕ್ರಮಣ ಮುಂತಾದ ವಿಚಾರಗಳು ಅವರ ಕವನಗಳಿಗೆ ವಸ್ತು ಒದಗಿಸಿವೆ. ಅಂತೆಯೇ ನಾಡನ್ನು ಕಟ್ಟುವ ಮಹಾ ಯೋಜನೆಗಳನ್ನು ಕುರಿತು ಕೂಡ ಅವರು ಬರೆದಿದ್ದಾರೆ. ಹೀಗಾಗಿ ಕಳೆದ ಮೂರು-ನಾಲ್ಕು ದಶಕಗಳ ಭಾರತದ ಹಾಗೂ ವಿಶ್ವದ ಇತಿಹಾಸವನ್ನು ಇವರ ಕವನಗಳಲ್ಲಿ ಗುರುತಿಸಬಹುದಾಗಿದೆ. 'ಕರೆಯುತಿಹಳು ರಣಭೈರವಿ, ಕೈಗೆ ಬರಲಿ ಕೋವಿ' ಎಂಬ ಕವನಕ್ಕೆ ಚೀನೀ ಆಕ್ರಮಣವೇ ನಿಮಿತ್ತ. 'ಅದೊ ಹಳದಿಯ ರಕ್ತಬೀಜ, ದನುಜನಾದ ನಿನ್ನ ಅನುಜ, ಸಿಡಿದೇಳಲಿ ಕ್ಷಾತ್ರ ತೇಜ, ಸುಟ್ಟುರುಳಲಿ ಅರಿ ಸಮಾಜ, ಬರಲಿ ಬಲವು ತೀವಿ-ಕೈಗೆ ಬರಲಿ ಕೋವಿ' ಎಂಬುದು ಆ ದಿನಗಳ ವ್ಯಾಖ್ಯಾನ. 'ಯುದ್ಧಸ್ವ ಯುದ್ಧಸ್ವ ಬಾ ಅರ್ಪಿಸು ಸರ್ವಸ್ವ!' ಎಂಬ ಕವನ ಬಹಳ ಜನಪ್ರಿಯ. 'ಅವಿಭಕ್ತಂ ವಿಭಕ್ತೇಷು. ಇದರಲ್ಲಿಯೆ ನಮಗೆ ಲೇಸು. ಎಲ್ಲೋ ಇರು, ಏನೆ ಮಾಡು, ಇದೇ ಮಂತ್ರವನ್ನು ಜಪಿಸು, ಇದೇ ಸೂತ್ರವನ್ನು ಪಠಿಸು' ಎಂಬುದು ಭಾರತದ ವೈವಿಧ್ಯದಲ್ಲಿ ಏಕತೆಯನ್ನು ನಿರೂಪಿಸುವ ಸುಂದರ ಕವನ. 'ಓದಿ ಬ್ರಾಹ್ಮಣನಾಗು, ಕಾದಿ ಕ್ಷತ್ರಿಯನಾಗು, ಶೂದ್ರವೈಶ್ಯನೆ ಆಗು ದುಡಿದು ಗಳಿಸಿ 'ಏನಾದರೂ ಆಗು ನಿನ್ನೊಲವಿನಂತಾಗು. ಏನಾದರೂ ಸರಿಯೇ- ಮೊದಲು ಮಾನವನಾಗು!' ಎಂಬುದು ಇಂದಿನ ಮಹದಾಶಯವನ್ನು ಕಾವ್ಯದಲ್ಲಿ ಅಭಿವ್ಯಕ್ತಿಸುವ ಪ್ರಯತ್ನ.

## 'ವಚನೋದ್ಯಾನ'

ಕಾವ್ಯಾನಂದರ ಕಾವ್ಯ ಪ್ರತಿಭೆ ಉನ್ನತ ನೆಲೆಮುಟ್ಟಿ ಸಾರ್ಥಕತೆ ಪಡೆದದ್ದು ಬಹುಶಃ 'ವಚನೋದ್ಯಾನ'ದಲ್ಲಿ. ಡಿವಿಜಿ ಅವರು ಬರೆದಿರುವಂತೆ, ಹೊಸ ಹೊಸ ಕಲ್ಪನೆಗಳ, ಹೊಸ ಹೊಸ ಉಪಮಾನಗಳ, ಪ್ರಾಸಗಳ, ಓಟ-ಕುಣಿತಗಳ ಪ್ರಯೋಗ ಮಾಡುತ್ತ ನಡೆದ ಕವಿ ಇಲ್ಲಿ ಶಿವಶರಣರ ವಚನ ಪ್ರಕಾರವನ್ನು ಬಳಸಿ ಉತ್ತಮ ಗದ್ಯ ಕಾವ್ಯವನ್ನು ರಚಿಸಿದ್ದಾರೆ. ಅವರ ಹಿಂದಿನ



ಸಂಕಲನಗಳಲ್ಲೇ ಅವರ ಬರವಣಿಗೆ ಈ ವಚನ ಪ್ರಕಾರದತ್ತ ನಡೆಯಲು ಎಳಸುತ್ತಿದ್ದುದನ್ನು ಗುರುತಿಸಬಹುದು. ಅವರ 'ಕಲ್ಲೋಲ ಮಾಲೆ'ಯಲ್ಲಿ ಇದನ್ನು ಕಾಣಬಹುದು. ಅನುಭಾವಗೀತಗಳ ಸಂಕಲನ. ಹೊಸ ಪ್ರಯೋಗಗಳ ಜೊತೆಗೆ ಅವರ ಕಾವ್ಯ ಬಹಳಷ್ಟು ಚಮತ್ಕಾರವನ್ನೂ ಅಲ್ಲಿ ಸಾಧಿಸಿದೆ. "ಸತ್ಯ ಕೇಳಿತು– 'ಮಿಥ್ಯೆ ನೀನು ನನಗಿಂತಲೂ ಹೇಗೆ ಜನಪ್ರಿಯಳಾಗಿರುವೆ?' ಮಿಥ್ಯೆ ಉತ್ತರಿಸಿತು– 'ಸತ್ಯದ ಸೋಗು ಹಾಕಿ'." "ಕಾರಂಜಿ ತಡಸಲಿಗೆ ಹೇಳಿತು– 'ಕೆಳಗಿಳಿಯುವುದು ಸುಲಭ, ಮೇಲೇರುವುದು ಕಷ್ಟ'." ಸಮುದ್ರ ಆಕಾಶಕ್ಕೆ ಹೇಳಿತಂತೆ : 'ಎಷ್ಟು ದುರಾಶೆಯೋ ನಿನಗೆ! ಲೆಕ್ಕವಿಲ್ಲದ ಚಿಕ್ಕೆ ಕಣ್ಣುಗಳನ್ನು ಪಿಳಕಿಸದೇ ನೋಡುತ್ತಲೇ ಇರುವಿ. ನನ್ನ ಮುತ್ತು ರತ್ನಗಳ ಮೇಲೆ ಕಣ್ಣಿಟ್ಟಿರುವೆಯಾ?' 'ಎಲೆಲೆ ಸಲಿಲದ ಮೀನೆ, ಎಷ್ಟು ಲೀಲಾಜಾಲವಾಗಿ ಮುಳುಗುವಿಯಲ್ಲ ನೀರಿನಲಿ! ಕಲಿಸಲಾರೆಯ ನನ್ನ ಮನದ ಮೀನಿಗೂ ನಿನ್ನಂತೆ ಮುಳುಗುವುದ? ತನ್ನಲ್ಲೆ ತಾನು ಮುಳುಗುವುದು! ಎಷ್ಟು ಕಷ್ಟದ ಕಾರ್ಯ. ಎಷ್ಟು ಸುಲಭ ಸಾಧನ! ಸಾಗರದಿ ಮುಳುಗಿದೆ. ಸರೋವರದಿ ಮುಳುಗಿದೆ. ಹೊನ್ನ ರಾಶಿಯಲ್ಲಿ ಮುಳುಗಿದೆ, ಹೆಣ್ಣ ಕೇಶದಲ್ಲಿ ಮುಳುಗಿದೆ. ಮಣ್ಣಿನಾಶೆಯಲ್ಲಿ ಮುಳುಗಿದೆ– ನಿನ್ನಲ್ಲಿ ನೀನು ಮುಳುಗಿದೆಯ? ಮುಳುಗಲಾರೆಯ ದಿನಕ್ಕೊಮ್ಮೆಯಾದರೂ? ಹೊರಗಿನಲಿ ಮುಳುಮುಳುಗಿ ಬಳಲುವ ಯುಗವೆ, ಒಳಗೆ ಮುಳುಗುವುದನ್ನು ಕಲಿಸುವ ಯುಗಕ್ಕೆ ದಾರಿ ಬಿಡು. ದಾರಿ ಬಿಡು! ಈ ಯುಗಾಂತವಾಗದೆ ಆ ಯುಗಾದಿಯೆಲ್ಲಿ?' ಎಂಬುದು ಗದ್ಯವೆ. ವಚನೋದ್ಯಾನದಲ್ಲಿ ಈ ಪ್ರಯೋಗ ಮುಂದುವರಿದು ಪರಾಕಾಷ್ಠೆ ಮುಟ್ಟಿದೆ.

1980ರ ಭಾರತೀಯ ಭಾಷಾ ಪರಿಷತ್ತಿನ ಬಹುಮಾನ ಪಡೆದ 'ವಚನೋದ್ಯಾನ'ದಲ್ಲಿ (1977) ಐನೂರಿಪ್ಪತ್ತೈದು ವಚನಗಳಿವೆ. 'ನನಗೆ ತೋರಿದಂತೆ ಬರೆದರೆ ಅದು ರಚನೆ. ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯ' ಎಂದು ಹೇಳಿ ತಮ್ಮ ವಚನದ ಸ್ವರೂಪವನ್ನು ವಿವರಿಸಿರುವ ಸಿದ್ಧಯ್ಯ ಪುರಾಣಿಕರು ಈ 'ವಚನಗಳಲ್ಲಿ 'ಸ್ವತಂತ್ರ ಸಿದ್ಧೇಶ್ವರ' ಎಂಬ ಅಂಕಿತ ಡಾ|| ಹಾ.ಮಾ. ನಾಯಕ ಅವರು ಈ ಪುಸ್ತಕದ ಮುನ್ನುಡಿಯಲ್ಲಿ ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು. 'ಪುರಾಣಿಕರ 'ಸಿದ್ಧೇಶ್ವರ'ನ ಗುಣವಾಚಕ 'ಸ್ವತಂತ್ರಧೀರ' ನಮ್ಮ ಕಾಲದ ಮಹಾಲಕ್ಷಣವನ್ನು ಸೂಚಿಸುತ್ತದೆ. ಸ್ವತಂತ್ರ ಪ್ರವೃತ್ತಿ






ಧೀರ ಗುಣಗಳು ಆಧುನಿಕ ಬದುಕನ್ನು ಆಳುತ್ತಿವೆ. ಅವು ಹೊಸ ಕಾಲದ ಬದುಕಿನ ಸೂತ್ರಗಳಾಗಿವೆ. ರಾಷ್ಟ್ರಗಳಷ್ಟೆ ಸ್ವಾತಂತ್ರ್ಯ ಪಡೆಯುವುದಲ್ಲ, ವ್ಯಕ್ತಿಯ ಜೀವನ ವಿಧಾನವೇ ಇಂದು ಸ್ವತಂತ್ರ ಮಾರ್ಗದ್ದು, ಚಂದ್ರಲೋಕದ ಆಚೆಗೂ ಹೋಗುವ ಧೀರರು ನಮ್ಮ ಸಮಕಾಲೀನರು. ಈ ಜೀವನೋದ್ದೇಶಗಳಿಗೆ ಪುರಾಣಿಕರ ಸಿದ್ಧೇಶ್ವರ ಪ್ರೇರಕನೂ, ಪೋಷಕನೂ ಆಗಿದ್ದಾನೆ. ಅವನ ಸ್ಫೂರ್ತಿಯ ಫಲವೆ ಇಲ್ಲಿನ ವಚನಗಳು'. ಅನುಭವ, ಚಿಂತನ, ಕಾವ್ಯಗುಣ– ಇವು ಮೂರೂ ಮುಪ್ಪುರಿಗೊಂಡ ಇಲ್ಲಿಯ ವಚನಗಳು ಹಳೆಯ ವಚನಕಾರರ ಚೌಕಟ್ಟಿನಲ್ಲಿ ಆಧುನಿಕ ಮನೋಧರ್ಮವನ್ನು ಅಭಿವ್ಯಕ್ತಿಸುತ್ತವೆ. 'ಭಾರತ–ಕರ್ನಾಟಕ'– ಇದು ಅವರ ಸಪ್ತಾಕ್ಷರೀಮಂತ್ರ, 'ಕನ್ನಡ–ಬಸವ' ಎಂಬುದು ಷಡಕ್ಷರೀ ಮಂತ್ರ, 'ಸತ್ಯ–ಸೌಂದರ್ಯ' ಪಂಚಾಕ್ಷರೀ ಮಂತ್ರ, 'ಪ್ರೀತಿ–ನೀತಿ' ಚತುರಕ್ಷರೀ ಮಂತ್ರ, 'ಜನತೆ' ಎಂಬುದು ತ್ರ್ಯಕ್ಷರೀ ಮಂತ್ರ, 'ಕಾವ್ಯ' ಇದು ದ್ವ್ಯಕ್ಷರೀ ಮಂತ್ರ, 'ನೀ' ಏಕಾಕ್ಷರೀ ಮಂತ್ರ, ಈ ಸಪ್ತ ಸೋಜಿಗಗಳನ್ನು ಕುರಿತ ವಚನಗಳು ಇಲ್ಲಿವೆ. 'ವಿಭಕ್ತದಲ್ಲಿಯೂ ಅವಿಭಕ್ತವನ್ನು' ಅರಸುವ, 'ನವೀಕರಣ'ಕ್ಕಾಗಿ ನಲುಗುವ ಬದಲು 'ಮಾನವೀಕರಣ'ವಾಗಬೇಕೆನ್ನುವ ಹಂಬಲ ಇಲ್ಲಿ ತುಂಬಿದೆ 'ವಿದ್ಯೆಯನ್ನು ಮುಚ್ಚಿಟ್ಟು ಮುಚ್ಚಿಟ್ಟು ವಿದ್ಯಾವಿಹೀನರ ಮಾಡಿದೆವಯ್ಯ ಬಹುಜನ ಸಮಾಜವನ್ನು, ದುಡಿವವರನ್ನು ಅಡಿಗೊತ್ತಿ ಅಡಿಗೊತ್ತಿ ಬಡವರನ್ನಾಗಿ ಮಾಡಿದೆವಯ್ಯ ಬಹು ಸಂಖ್ಯೆಯ ಶ್ರಮಿಕರನ್ನು; ಆದಿ ಜನರನ್ನೇ ಹೊರಗಿಟ್ಟು ಹೊರಗಿಟ್ಟು ದಲಿತರನ್ನಾಗಿ ಮಾಡಿದೆವಯ್ಯ ದೇವರ ಮಕ್ಕಳನ್ನು : ಅಬಲೆಯರನ್ನೂ ಅದುಮಿಟ್ಟು ಅದುಮಿಟ್ಟು ಅಸಹಾಯಕರನ್ನಾಗಿ ಮಾಡಿದೆವಯ್ಯ ಅಕ್ಕತಂಗಿಯರನ್ನು; ಉಳುವವರನ್ನು ಕೆಳಗೊತ್ತಿ ಕೆಳಗೊತ್ತಿ ಬಲಹೀನರನ್ನಾಗಿ ಮಾಡಿದೆವಯ್ಯ ಬೇಸಾಯಗಾರರನ್ನು; ಓದಿಸುವವರನ್ನು ಉದಾಸೀನ ಮಾಡಿ ಮಾಡಿ ಅಲಕ್ಷಿತರನ್ನಾಗಿ ಮಾಡಿದೆವಯ್ಯ ನಮ್ಮ ಶಿಕ್ಷಕರನ್ನು! ಇವರೆಲ್ಲರ ದಾರಿದ್ರ್ಯವ ಹೊತ್ತು ನಿಂತಿದೆ ಕೆಲವೇ, ಕೆಲವರ ಸಿರಿವಂತಿಕೆಯ ಸೌಧ! ಇವರೆಲ್ಲರ ಅಜ್ಞಾನವ ಎತ್ತಿ ನಿಂತಿದೆ ಕೆಲವೇ ಕೆಲವರ ಜ್ಞಾನವಂತಿಕೆಯ ಸದ್ಮ! ತಲೆಕೆಳಗಾದ ಪಿರಮಿಡ್ಡು ಈ ಸಮಾಜ! ಬಿರುಗಾಳಿಗೆ ಉರುಳಿಬೀಳುವ ಮುನ್ನ ನಿಡುಬುಡದ ಮೇಲೆ ನಿಲ್ಲಿಸಯ್ಯ ಇದನು– ಸ್ವತಂತ್ರಧೀರ ಸಿದ್ಧೇಶ್ವರಾ!' ಎಂಬ ವಚನ ಸಮಕಾಲೀನ ಪರಿಸ್ಥಿತಿಯ ವ್ಯಾಖ್ಯಾನ.

ಡಾ|| ಸಿದ್ಧಯ್ಯ ಪುರಾಣಿಕರು ಸಾಹಿತ್ಯದ ಇತರ ಪ್ರಕಾರಗಳಲ್ಲೂ ಕೈಯಾಡಿಸಿದ್ದಾರೆ. ಕೆಲವನ್ನು ಇಲ್ಲಿ ಹೆಸರಿಸಬಹುದು : 'ಶರಣ ಚರಿತಾಮೃತ' ಜೀವನ ಚರಿತ್ರೆ, 'ಭಾರತವೀರ' ಮೂರು ಅಂಕಗಳ ನಾಟಕ 'ತುಷಾರ ಹಾರ' ಕಿರುಗತೆಗಳು. 'ತ್ರಿಭುವನ ಮಲ್ಲ' ಐತಿಹಾಸಿಕ ಕಾದಂಬರಿ. ಒಟ್ಟು ಇಪ್ಪತ್ತೈದಕ್ಕೂ ಹೆಚ್ಚು ಅವರ ಕೃತಿಗಳು. ಅವರ ರೇಡಿಯೋ ನಾಟಕಗಳು ಬಹಳ ಪರಿಣಾಮಕಾರಿ.

## ಗೌರವ ಡಾಕ್ಟೊರೇಟ್

ಡಾ|| ಸಿದ್ಧಯ್ಯ ಪುರಾಣಿಕರ 'ತುಷಾರ ಹಾರ' ಹಿಂದಿಗೆ ಅನುವಾದವಾಗಿದೆ. 'ಮಾನಸ ಸರೋವರ'ಕ್ಕೆ ರಾಜ್ಯ ಸರಕಾರದ ಬಹುಮಾನವೂ 'ತುಪ್ಪಾ ರೊಟ್ಟಿ ಗೇಗೇಗೇ'ಗೆ ಭಾರತ ಸರ್ಕಾರದ ಬಹುಮಾನವೂ ದೊರಕಿದೆ: 'ಗಿರಿಜಾ ಕಲ್ಯಾಣ' ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸೇರ್ಪಡೆಗೊಂಡ ಪ್ರಥಮ ಕನ್ನಡ ಗೀತ ನಾಟಕ. 'ವಚನೋದ್ಯಾನ' ಭಾರತೀಯ ಭಾಷಾಪರಿಷತ್ತಿನ ಭಿಲ್ವಾರ ಬಹುಮಾನಪಡೆದ ಪ್ರಥಮ ಕನ್ನಡ ಕೃತಿ. ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿ ಲೇಖಕರ ಗೋಷ್ಠಿ



ಸ್ವಾಗತ ಸಮಿತಿ, ಹಿಂದೀ ಸಾಹಿತ್ಯ ಸಮ್ಮೇಳನದ ಪಂಚಭಾಷಾ ಕವಿ ಗೋಷ್ಠಿ, ಧರ್ಮಸ್ಥಳದ ಸಾಹಿತ್ಯ ಹಾಗೂ ಧರ್ಮ ಸಮ್ಮೇಳನ, ಹೊಂಬುಜದ ಸಾಹಿತ್ಯ ಸಮ್ಮೇಳನ ಹಾಗೂ ಧರ್ಮ ಸಮ್ಮೇಳನ, ದಸರಾ ಕವಿ ಸಮ್ಮೇಳನ, ಹೈದರಾಬಾದು ಪ್ರದೇಶ ಕನ್ನಡ ಸಮ್ಮೇಳನ, ನವಿಲುಗುಂದದ ಸರ್ವ ಧರ್ಮ ಸಮ್ಮೇಳನ ಮುಂತಾದವುಗಳ ಅಧ್ಯಕ್ಷರೂ ಹಲವಾರು ಸಮ್ಮೇಳನಗಳ ಉದ್ಘಾಟಕರೂ, ಅನೇಕ ಸಂಘ ಸಮಿತಿಗಳ ಸದಸ್ಯರೂ ಆಗಿರುವ ಡಾ|| ಸಿದ್ಧಯ್ಯ ಪುರಾಣಿಕರು ಕನ್ನಡಕ್ಕಾಗಿ, ಸಮಾಜಕ್ಕಾಗಿ ದುಡಿದವರು, ದುಡಿಯುತ್ತಿರುವವರು. ಡಾ|| ಪುರಾಣಿಕರ ಬಹುಮುಖ ಸೇವೆಯನ್ನು ಮೆಚ್ಚಿ ಕರ್ನಾಟಕ ವಿಶ್ವವಿದ್ಯಾಲಯ 1976ರಲ್ಲಿ ಅವರಿಗೆ ಗೌರವ ಡಾಕ್ಟೊರೇಟ್ ನೀಡಿ ಗೌರವಿಸಿತು. 1981ರಲ್ಲಿ ಅವರು ಮಾಳವಾಡ ಪ್ರಶಸ್ತಿಗಳಿಸಿದರು. 1981ರಲ್ಲಿ ಡಾ|| ಪುರಾಣಿಕರ ಮಿತ್ರರೂ ಸಹೃದಯರೂ ಕೂಡಿ ಅವರಿಗೆ ಅಭಿನಂದನೆ ಸಲ್ಲಿಸಿ 'ಕಾವ್ಯಾನಂದ' ಎಂಬ ಸಂಭಾವನಾ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ವರ್ಷ ಅವರು ಕಲ್ಬುರ್ಗಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ●